# 3. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ತೆವರತೆಪ್ಪ



**01 ಶಾಲಾ ಹಿನ್ನೆಲೆ:–** ಈ ಶಾಲೆಯು 1965ನೇ ಇಸವಿಯಿಂದ ತೆವರತೆಪ್ಪ ಮತ್ತು ತೆವರತೆಪ್ಪ ವಡ್ಡಿಗೆರೆ ಗ್ರಾಮದ ಮಕ್ಕಳಿಗೆ ಶಿಕ್ಷಣಕೇಂದ್ರವಾಗಿ ಕಾರ್ಯನಿರ್ವಹಿಸಿದ್ದು, ಪ್ರಸ್ತುತ ತೆವರತೆಪ್ಪ ಗ್ರಾಮದ ಮಕ್ಕಳ ವಿದ್ಯಾಕೇಂದ್ರವಾಗಿದೆ. ಎಣ್ಣೇಕೊಪ್ಪ ಕ್ಲಸ್ಟರ್‌ಗೆ ಒಳಪಟ್ಟು ಸೊರಬ ತಾಲ್ಲೂಕಿಗೆ ಸೇರಿದ ಗ್ರಾಮೀಣ ಸೊಗಡನ್ನು ಹೊಂದಿರುವ ಹಳ್ಳಿಯ ಶಾಲೆಯಾಗಿದೆ.

**02 ಶಾಲಾ ಮಹಾದ್ವಾರ :–** ಶಾಲಾ ಆವರಣದ ಮೂರು ದಿಕ್ಕಿನಲ್ಲಿ ಕಾಂಪೌಂಡ್ ನಿರ್ಮಾಣವಾಗಿದ್ದು ಒಂದು ಭಾಗ ಅಪೂರ್ಣಗೊಂಡಿರುವ ಕಾರಣ ಮಹಾದ್ವಾರ ನಿರ್ಮಾಣವಾಗಿಲ್ಲ. ಆ ನಿಟ್ಟಿನಲ್ಲಿ ಶಾಲಾ ಸಿಬ್ಬಂದಿ ಹಾಗೂ ಎಸ್.ಡಿ.ಎಮ್.ಸಿ ರವರು ಗ್ರಾಮಪಂಚಾಯತಿಗೆ ಮನವಿ ನೀಡಿ ಕಾಂಪೌಂಡ್ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಿಸಿಕೊಂಡಿರುತ್ತಾರೆ. ಕಾಂಪೌಂಡ್ ನಿರ್ಮಾಣದ ಜೊತೆಗೆ ಶಾಲಾ ಮಹಾದ್ವಾರದ ನಿರ್ಮಾಣವೂ ಅಗುತ್ತದೆ.



**03 ಶಾಲಾ ಕೊಠಡಿಗಳು :–** ಈ ಶಾಲೆಯಲ್ಲಿ ಪ್ರಸ್ತುತ ಎರಡು ಕೊಠಡಿಗಳಿದ್ದು ಸುಸಜ್ಜಿತವಾಗಿವೆ. ಒಂದು ಕೊಠಡಿಯನ್ನು 2011–12ರಲ್ಲಿ ನಿರ್ಮಿಸಿದ್ದು, ಅದರಲ್ಲಿ 4 & 5ನೇ ತರಗತಿಗಳು ನಡೆಯುತ್ತವೆ. ಇನ್ನೊಂದು ಕೊಠಡಿಯು ಕಳೆದ 2018–19ನೇ ಸಾಲಿನಲ್ಲಿ ನಿರ್ಮಾಣವಾಗಿದ್ದು, ಅದರಲ್ಲಿ ನಲಿ–ಕಲಿ ತರಗತಿಗಳು ನಡೆಯುತ್ತವೆ. 2019–20ನೇ ಸಾಲಿನಲ್ಲಿ ಮುಖ್ಯಶಿಕ್ಷಕರ ಕೊಠಡಿಯನ್ನ ಅತ್ಯಂತ ಕಡಿಮೆ ಖರ್ಚಿನಲ್ಲಿ ಕಟ್ಟಿಸಲು ಜಿಲ್ಲಾ ಪಂಚಾಯತಿಯ ಅನುದಾನದ ಅನುಮೋದನೆಯನ್ನು ಪಡೆಯಲಾಗಿದ್ದು ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲಿದೆ.






**04 ಶಿಕ್ಷಕರು :–** ಈ ಶಾಲೆಗೆ ಒಟ್ಟು ಎರಡು ಹುದ್ದೆಗಳು ಮಂಜೂರಾಗಿದ್ದು ಪ್ರಸ್ತುತ ಇಬ್ಬರು ಶಿಕ್ಷಕರು ಕರ್ತವ್ಯ ನಿರ್ವಹಿಸುತಿದ್ದಾರೆ. ಶ್ರೀ ಬಸವಂತಪ್ಪ ಕೆ ಇವರು ಮುಖ್ಯಶಿಕ್ಷಕರಾಗಿಯೂ, ಶ್ರೀ ಮೋಹನ್ ಕುಮಾರ್ ಯು.ಬಿ ರವರು ಸಹ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**05 ಶಾಲಾ ಕಾಂಪೌಂಡ್ & ಗೋಡೆ ಬರಹ :–** ಈ ಶಾಲೆಯ ಮೂರು ಭಾಗದಲ್ಲಿ ಕಾಂಪೌಂಡ್ ನಿರ್ಮಾಣ ವಾಗಿದ್ದು ಇನ್ನೊಂದು ಭಾಗ ನಿರ್ಮಾಣವಾಗಬೇಕಿದೆ, ಅದಕ್ಕೆ ಗ್ರಾಮಪಂಚಾಯತಿ ವತಿಯಿಂದ ನರೇಗಾ ಯೋಜನೆಯಡಿ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲಿದೆ. ಅನಂತರ ಅದರ ಮೇಲೆ ಗೋಡೆ ಬರಹ ಬರೆಸಲಾಗುವುದು.

**06 ಶಾಲಾ ಕೊಳವೆ ಬಾವಿ :–** ಈ ಶಾಲೆಗೆ ಮುಖ್ಯೋಪಾಧ್ಯಾಯರು ಮತ್ತು ಎಸ್.ಡಿ.ಎಮ್.ಸಿ ಯವರ ಮನವಿಯ ಮೆರೆಗೆ 2018–19ನೇ ಸಾಲಿನ ಹಣಕಾಸು ವರ್ಷದಲ್ಲಿ ಜಿಲ್ಲಾ ಪಂಚಾಯತಿ ವತಿಯಿಂದ ಶಾಲಾ ಕುಡಿಯುವ ನೀರು ಹಾಗೂ ಶಾಲಾ ಉದ್ಯಾನವನದ ರಕ್ಷಣೆಗೆ ಕೊಳವೆ ಬಾವಿ ಮಂಜೂರಾಗಿದ್ದು, ಈಗಾಗಲೇ ಬಾವಿ ಕೊರೆಸಲಾಗಿದೆ.



**07 ಶಾಲಾ ಆವರಣ :–** ಈ ಶಾಲೆಯು ಸುಮಾರು ಎರಡು ಎಕರೆಯಷ್ಟು ಜಾಗವನ್ನು ಹೊಂದಿದ್ದು, ಒಂದು ಎಕರೆಯಷ್ಟು ಜಾಗದಲ್ಲಿ ಶಾಲಾ ಕೊಠಡಿಗಳು, ಅಡುಗೆ ಕೋಣೆ, ದಾಸ್ತಾನು ಕೊಠಡಿ, ಅಂಗನವಾಡಿ ಕೇಂದ್ರ ಹಾಗೂ ಶಾಲಾ ಉದ್ಯಾನವನವನ್ನು ಹೊಂದಿದೆ. ಉಳಿದ ಭಾಗ ವಿವಿಧ ಜಾತಿಯ ಮರಗಳನ್ನು, ಹಣ್ಣಿನ ಗಿಡಗಳನ್ನು ಮತ್ತು ತೆಂಗಿನ ಗಿಡಗಳನ್ನು ಒಳಗೊಂಡ ಶಾಲಾವನವಾಗಿದೆ.






**08 ಶಾಲಾ ಪರಿಸರ :–** ಈ ಶಾಲೆಯ ಶಾಲಾ ಪರಿಸರವು ಹಸಿರಿನಿಂದ ಕೂಡಿದ್ದು ನಯನಮನೋಹರವಾಗಿದೆ. ಶಾಲಾ ಆವರಣದಲ್ಲಿರುವ ವಿವಿಧ ಜಾತಿಯ ಮರಗಿಡಗಳು, ಹಣ್ಣಿನ ಗಿಡಗಳು, ಔಷಧ ಸಸ್ಯಗಳು ಹಾಗೂ ಅಲಂಕಾರಿಕ ಗಿಡಗಳು ಶಾಲಾ ಪರಿಸರವನ್ನು ಆಕರ್ಷಣೀಯವನ್ನಾಗಿಸಿದೆ.

**09 ಶಾಲಾ ಕೈತೋಟ :–** ಶಾಲಾ ಕೈತೋಟದಲ್ಲಿ ಹಲವು ಬಗೆಯ ತರಕಾರಿ ಸಸ್ಯಗಳನ್ನು ಬೆಳೆಸಿ ಮಧ್ಯಾಹ್ನದ ಬಿಸಿ ಊಟಕ್ಕೆ ಬಳಸಿಕೊಳ್ಳಲಾಗುತ್ತಿದೆ. ತೋಟದಲ್ಲಿ ಪಪ್ಪಾಯಿ ಬಾಳೆಗಿಡಗಳಿದ್ದು ಅದರಿಂದ ದೊರೆತ ಹಣ್ಣುಗಳನ್ನು ಮಕ್ಕಳಿಗೆ ನೀಡಲಾಗುತ್ತಿದೆ



- **ಹಣ್ಣಿನ ಗಿಡಗಳು :–** 2017–18ನೇ ಸಾಲಿನಲ್ಲಿ ಅಂಜೂರ, ಸೀತಾಫಲ, ರಾಮಫಲ, ಲಕ್ಷ್ಮಣಫಲ, ಪಪ್ಪಾಯಿ, ಬಾಳೆ, ಮಾವು, ಸಪೋಟ, ನೆಲ್ಲಿ, ಬೆಟ್ಟದನೆಲ್ಲಿ, ಹಲಸು, ದಾಳಿಂಬೆ, ನೇರಳೆ, ಚೆರ್ರಿ, ಪೇರಲ ಮುಂತಾದ ಸುಮಾರು 15 ಜಾತಿಯ ಹಣ್ಣಿನ ಗಿಡಗಳನ್ನು ನೆಡಲಾಗಿದೆ.






**ಶಾಲಾವನ :–** ಈ ಶಾಲೆಯಲ್ಲಿ ತೇಗ, ಮಾವು, ಅಕೇಶಿಯಾ, ಶಿವಾನಿ, ರಕ್ತಚಂದನ, ಹುಣಸೆ, ಚಕ್ಕೆ, ನೇರಳೆ, ಬಿಲ್ವಪತ್ರೆ, ಬೇವು, ಹೊಂಗೆ, ಕಾಡುಬಾದಾಮಿ ಸೇರಿದಂತೆ ಸುಮಾರು 25 ತೆಂಗಿನ ಗಿಡಗಳನ್ನು ಒಳಗೊಂಡಿರುವ ಶಾಲಾವನವನ್ನು ನಿರ್ಮಿಸಿ ಶಾಲಾ ಅಂದವನ್ನು ಹೆಚ್ಚಿಸಲಾಗಿದೆ.



**ಧನ್ವಂತರಿ ವನ :–** ಈ ಶಾಲೆಯಲ್ಲಿ 2017–18ರಲ್ಲಿ ಧನ್ವಂತರಿ ವನವನ್ನು ನಿರ್ಮಿಸಲಾಗಿದೆ ಇಲ್ಲಿ ಲೋಳೆಸರ, ದೊಡ್ಡಪತ್ರೆ, ಒಂದೆಲಗ, ತುಳಸಿ, ಕಾಡುತುಳಸಿ, ಉತ್ತರಾಣಿ, ಮುಟ್ಟಿದರೆಮುನಿ, ಬೇವು, ಲಾವಂಚ, ಕಾಡುಬದನೆ, ಪುದೀನ ಮೊದಲಾದ ಔಷದಿ ಸಸ್ಯಗಳನ್ನು ಬೆಳೆಸಲಾಗಿದೆ.

## 09 ಶಾಲಾ ಗೋಡೆ ಬರೆಹಗಳು :–

2019–20ನೇ ಸಾಲಿನಲ್ಲಿ ಶಾಲಾ ಕೊಠಡಿಗಳ ಗೋಡೆಗಳ ಮೇಲೆ ಮಕ್ಕಳ ವಯೋಮಾನ, ತರಗತಿ ಪಠ್ಯಕ್ರಮಕ್ಕೆ ಸಂಬಂಧಿಸಿದ ಅನೇಕ ಚಿತ್ರಗಳನ್ನು, ಮಾಹಿತಿಗಳನ್ನು ನಕ್ಷೆಗಳನ್ನು ಚಿತ್ರಿಸಲಾಗಿದ್ದು ಆಕರ್ಷಣೀಯವಾಗಿದೆ.





**10 ನಲಿ–ಕಲಿ ಕೊಠಡಿ ಶೃಂಗಾರ :–** 2019–20ನೇ ಸಾಲಿನಲ್ಲಿ ಹೊಸದಾಗಿ ನಿರ್ಮಾಣಗೊಂಡ ಕೊಠಡಿಯನ್ನು ನಲಿ–ಕಲಿ ಕೊಠಡಿಯನ್ನಾಗಿ ಮಾಡಿಕೊಂಡು ಅದರಲ್ಲಿ ವಾಲ್‌ಸ್ಲೇಟ್, ಗೋಡೆ ಬರಹ, ನಲಿ–ಕಲಿ ಚಪ್ಪರ, ಕಲಿಕಾತಟ್ಟೆ ನಿರ್ಮಾಣ, ಹಲಗೆಗಳಿಂದ ನಿರ್ಮಿಸಲಾದ ವಿಶೇಷ ವ್ಯವಸ್ಥೆಯಲ್ಲಿ ಕಾರ್ಡುಗಳ ಜೋಡಣೆಗೆ ಹಾಗೂ ಕಲಿಕೋಪಕರಣಗಳನ್ನು ಇಡಲು ವ್ಯವಸ್ಥೆ ಮಾಡಲಾಗಿದೆ.





**11 ಪಾಠೋಪಕರಣಗಳು :–** ಶಿಕ್ಷಕರ ಅನುದಾನದಡಿ ಹಲವಾರು ಪಾಠೋಪಕರಣಗಳನ್ನು ಖರೀದಿಸಿ ಉತ್ತಮ ರೀತಿಯಲ್ಲಿ ಜೋಡಿಸಿಟ್ಟು ಉಪಯೋಗಿಸಿಕೊಳ್ಳಲಾಗುತ್ತಿದೆ. ನಲಿ–ಕಲಿ ಕೊಠಡಿಯಲ್ಲಿ ಇಲಾಖೆ ನೀಡಿದ ಕಿಟ್‌ಗಳನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ.






**12 ಶಾಲಾ ಗ್ರಂಥಾಲಯ :–** ಕೊಠಡಿಯ ಮೂಲೆಯೊಂದರಲ್ಲಿ ಹಲವು ಸೆಲ್ಫ್‌ಗಳನ್ನೊಳಗೊಂಡ ಗ್ರಂಥಾಲಯ ನಿರ್ಮಿಸಿಕೊಂಡಿದ್ದು, ಮಕ್ಕಳ ಕೈಗೆ ನಿಲುಕುವಂತೆ ವಿಷಯವಾರು ವಿಂಗಡಿಸಿ ಪುಸ್ತಕಗಳನ್ನು ಜೋಡಿಸಿಡಲಾಗಿದೆ. ಪ್ರತಿದಿನ ಪ್ರಾರ್ಥನೆ ಸಮಯದಲ್ಲಿ ಒಂದೊಂದು ಪುಸ್ತಕದ ಪರಿಚಯ ಮಾಡಿಕೊಡಲಾಗುತ್ತಿದೆ.

13 ಪೀಠೋಪಕರಣಗಳು/ದೇಣಿಗೆ ವಸ್ತುಗಳು :– 2019–20ನೇ ಸಾಲಿನಲ್ಲಿ ಎಸ್.ಡಿ.ಎಮ್.ಸಿ ಸದಸ್ಯರು ಪ್ರತಿಯೊಬ್ಬರು ಒಂದೊಂದು ಪ್ಲಾಸ್ಟಿಕ್ ಚೇರುಗಳನ್ನು ದೇಣಿಯಾಗಿ ನೀಡಿದ್ದಾರೆ. ಮುಖ್ಯಶಿಕ್ಷಕರಾದ ಬಸವಂತಪ್ಪ ನವರು ಶಾಲೆಗೆ ಒಂದು ಡಯಾಸ್, ಒಂದು ಕಛೇರಿ ಟೇಬಲ್ ನೀಡಿರುತ್ತಾರೆ. 2013–14ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತಿ ಸದಸ್ಯರಾದ ಶ್ರೀ ಈರಪ್ಪ ಗಂಟೇರ್ ರವರು 4 ಡೆಸ್ಕ್‌ಗಳನ್ನು, 1 ಟೇಬಲನ್ನು ಮತ್ತು ಒಂದು ಕುರ್ಚಿಯನ್ನು ನೀಡಿರುತ್ತಾರೆ.








14 ಕುಡಿಯುವ ನೀರಿನ ವ್ಯವಸ್ಥೆ :– ಪ್ರಸ್ತುತ ಕುಡಿಯುವ ನೀರಿಗೆ ಗ್ರಾಮಪಂಚಾಯತಿ ವತಿಯಿಂದ ಒದಗಿಸಲಾದ ನಲ್ಲಿಯ ನೀರನ್ನ ಬಳಸಲಾಗುತ್ತಿದ್ದು, ಈ ವರ್ಷ ಹೊಸದಾಗಿ ಶಾಲೆಗೆಂದೇ ಕೊಳವೆ ಬಾವಿಯನ್ನು ಕೊರೆಸಲಾಗಿದೆ. ನೀರಿನ ಸಂಗ್ರಹಕ್ಕೆ ಡ್ರಂ ವ್ಯವಸ್ತೆ ಇದ್ದು, ಫಿಲ್ಟರ್‌ನಿಂದ ಸೋಸಿದ ನೀರನ್ನು ಕುಡಿಯಲು ಬಳಸಿಕೊಳ್ಳಲಾಗುತ್ತಿದೆ. ಶಾಲಾ ಕೈತೋಟಕ್ಕೆ ನೀರಿನ ತೊಟ್ಟಿ ನಿರ್ಮಿಸಿದ್ದು, ಮೋಟರ್ ವ್ಯವಸ್ಥೆಯಿಂದ ನೀರೆತ್ತಿ ಗಿಡಗಳಿಗೆ ಪೈಪ್ ಮೂಲಕ ನೀರುಣಿಸಲಾಗುತ್ತಿದೆ.




**16 ಕಸದ ತೊಟ್ಟಿ ನಿರ್ಮಾಣ :–** ಹಸಿ ಕಸವನ್ನು ಸಂಗ್ರಹಿಸಲು ಗುಂಡಿ ನಿರ್ಮಿಸಲಾಗಿದೆ. ಒಣಕಸ & ಅಪಾಯಕಾರಿ ಕಸದ ನಿರ್ವಹಣೆಗೆ ಡ್ರಂ ವ್ಯವಸ್ಥೆ ಮಾಡಲಾಗಿದೆ.



**18 ಉಗ್ರಾಣ ಕೊಠಡಿ :–** ಉಗ್ರಾಣ ಕೊಠಡಿಯು ಉತ್ತಮರೀತಿಯಲ್ಲಿದ್ದು, ಧಾನ್ಯಗಳ ಸುರಕ್ಷತೆಗೆ ಸೆಲ್ಫ್ ನಿರ್ಮಿಸಲಾಗಿದೆ.



**15 ಶೌಚಾಲಯ ವ್ಯವಸ್ಥೆ :–** ಎಸ್ ಎಸ್ ಎ ಯೋಜನೆಯಡಿಯಲ್ಲಿ ಬಾಲಕ & ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಕೊಠಡಿಗಳು ನಿರ್ಮಾಣಗೊಂಡಿದ್ದು, 2017–18ನೇ ಸಾಲಿನಲ್ಲಿ ಅವುಗಳನ್ನು ಗ್ರಾಮ ಪಂಚಾಯತಿ ವತಿಯಿಂದ ದುರಸ್ಥಿಗೊಳಿಸಲಾಗಿದೆ. ನಲ್ಲಿ ನೀರಿನ ವ್ಯವಸ್ಥೆ ಮೂಲಕ ಉತ್ತಮ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ.




**17 ಅಡುಗೆ ಕೊಠಡಿ :–** ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಅಡುಗೆ ಕೊಠಡಿ ನಿರ್ಮಿಸಿದ್ದು, ಸ್ವಚ್ಛತೆ & ಶುಭ್ರತೆಯನ್ನು ಕಾಪಾಡಿಕೊಳ್ಳಲಾಗಿದೆ. ಗೋಡೆಯ ಮೇಲೆ ಎಚ್ಚರಿಕಾ ಕ್ರಮಗಳನ್ನು, ತುರ್ತ ಸಹಾಯವಾಣಿ ಸಂಖ್ಯೆಗಳನ್ನು ಬರೆಸಲಾಗಿದೆ.



**19 ನಲಿ–ಕಲಿ ಪೊಪೆಟ್‌ಗಳು :–** ನಲಿ–ಕಲಿ ತರಗತಿಗೆ ವ್ಯವಸ್ಥಿತ ಪೊಪೆಟ್ ಶೋ ಸ್ಕ್ರೀನನ್ನು ತಯಾರಿಸಲಾಗಿದೆ ಕೆಲವು ಗೊಂಬೆಗಳನ್ನು ಸ್ವತಃ ತಯಾರಿಸಿ & ಕೆಲವು ಸಿದ್ದಗೊಂಬೆಗಳನ್ನು ಖರೀದಿಸಿ ಬಳಸಿಕೊಳ್ಳಲಾಗುತ್ತಿದೆ






**20 ಗ್ರಾಮ ನಕ್ಷೆ :–** 2019–20ನೇ ಸಾಲಿನಲ್ಲಿ ಶಾಲಾ ಕೊಠಡಿಯ ಗೋಡೆಯ ಮೇಲೆ ಗ್ರಾಮ ನಕ್ಷೆಯನ್ನು ಚಿತ್ರಿಸಲಾಗಿದೆ.

**21 ಕ್ರೀಡಾ ಸಾಮಗ್ರಿಗಳು :–** ಶಾಲೆಯಲ್ಲಿ ಲೇಜಿಮ್ಸ್, ಸ್ಕಿಪ್ಪಿಂಗ್ ಹಗ್ಗಗಳು, ಬ್ಯಾಟ್‌ಮಿಂಟನ್ ಬ್ಯಾಟ್‌ಗಳು, ಕ್ರಿಕೆಟ್ ಟೂಲ್ ಕಿಟ್, ಥ್ರೋಬಾಲ್, ಚೆಸ್‌ಬೋರ್ಡ್, ಹಾವುಏಣಿ ಬೋರ್ಡ್ ಲೂಡೋ ಬೋರ್ಡ್ ಸೇರಿದಂತೆ ಹಲವಾರು ಆಟದ ಸಾಮಗ್ರಿಗಳಿವೆ.

ಈ ಮೇಲ್ಕಂಡ ರೀತಿಯಲ್ಲಿ 2019–20ನೇ ಸಾಲಿನ ಶಾಲಾ ಯಶೋಗಾಥೆ ಯೋಜನೆಯ ಎಲ್ಲ ಅಂಶಗಳನ್ನು ಶಾಲಾ ಸಿಬ್ಬಂಧಿ ವರ್ಗ, ಎಸ್.ಡಿ.ಎಮ್.ಸಿ ಸದಸ್ಯರು ಹಾಗೂ ಪೋಷಕರ ಸಹಕಾರದೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಶೈಕ್ಷಣಿಕವಾಗಿ ಹಾಗೂ ಇತರ ಭೌತಿಕ ಪರಿಸರದ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸಿ ಶಾಲೆಯನ್ನು ಉನ್ನತ ಮಟ್ಟದತ್ತ ಕೊಂಡೊಯ್ಯುತ್ತೇವೆಂದು ತಿಳಿಸುತ್ತಾ, ನಮ್ಮ ಯಶೋಗಾಥೆಯನ್ನು ಈ ರೀತಿಯಾಗಿ ಬಿತ್ತರಿಸುತ್ತೇವೆ.